File No. : AGRI-AMS/4/2019-AGRI_PLAN_B-AGRICULTURE Secretariat

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಆರ್ಥಿಕ ನೆರವನ್ನು ಒದಗಿಸಿಕೊಳ್ಳುವ ಕುರಿತು

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕೃಇ 92 ಕೃಉಇ 2018, ದಿನಾಂಕ: 17.01.2019.

2. ದಿನಾಂಕ: 05.03.2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ: WDD/PC/PPP-IAD/36/2018-19, ದಿನಾಂಕ: 27.03.2019 & 03.05.2019.

*****

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಯವರು 2018ರ ಜುಲೈ ಭಾಷಣದಲ್ಲಿ, ರೈತರನ್ನು ಸಂಘಟಿಸಿ ಅವರ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೇ ಅವರು ಬೆಳೆದಂತಹ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸುವ ಅವಶ್ಯಕತೆ ಇರುತ್ತದೆಂದು ಘೋಷಿಸಿರುವ ಕಂಡಿಕೆಗೆ ಅನುಸಾರವಾಗಿ ರೈತರ ಸಂಘಟನೆ ಹಾಗೂ ಸಾಮರ್ಥ್ಯ ಅಭಿವೃದ್ಧಿ ಮಾಡುವುದರ ಜೊತೆಗೆ ರೈತರ ಆದಾಯವನ್ನು ಹೆಚ್ಚಿಸಿ, ತನ್ಮೂಲಕ ಕೃಷಿ ಆಧಾರಿತ ಜೀವನೋಪಾಯ ಕ್ರಮಗಳನ್ನು ಬಲಪಡಿಸುವ ಉದ್ದೇಶದಿಂದ "ಕರ್ನಾಟಕ ರೈತ ಉತ್ಪಾದಕ ಸಂಸ್ಥೆ (FPO) ನೀತಿ-2018" ಅನ್ನು ಜಾರಿಗೆ ತರಲಾಗಿದೆ.

ಮೇಲೆ ಓದಲಾದ (2)ರ ನಡವಳಿಯಲ್ಲಿ, ದಿನಾಂಕ: 05.03.2019ರಂದು ನಡೆದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, 2019-20ನೇ ಸಾಲಿನಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯವನ್ನು ಕ್ಷೇತ್ರಮಟ್ಟದಲ್ಲಿ ಪ್ರಾರಂಭಿಸಬೇಕಾಗಿದ್ದು, ಇದಕ್ಕಾಗಿ ರೈತರ ಸಂಘಟನೆ, ರೈತ ಆಸಕ್ತ ಗುಂಪುಗಳ ಪ್ರಮುಖ ಸದಸ್ಯರಿಗೆ ತರಬೇತಿ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ, ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ಕ್ಷೇತ್ರ ಭೇಟಿ/ಅಧ್ಯಯನ ಪ್ರವಾಸ, ಸಂಸ್ಥೆಯ ರಚನೆ ಮತ್ತು ನೋಂದಣಿ ಕಾರ್ಯಕ್ಕಾಗಿ ಆರ್ಥಿಕ ನೆರವು ಮೂರು ವರ್ಷಗಳಿಗೆ ಈ ಕೆಳಕಂಡಂತೆ ನಿಗದಿಪಡಿಸಿ, ರೂ. 30.00 ಲಕ್ಷಗಳನ್ನು ಮೀರಬಾರದೆಂದು ತೀರ್ಮಾನಿಸಲಾಗಿದೆ.

| ಘಟಕವಾರು 1000 ಸದಸ್ಯರನ್ನೊಳಗೊಂಡ ಪ್ರತಿ ರೈತ ಉತ್ಪಾದಕರ ಸಂಸ್ಥೆಯ ರಚನೆಗೆ ಮತ್ತು ಉತ್ತೇಜನಕ್ಕೆ ನೀಡಲಾಗುವ ಆರ್ಥಿಕ ನೆರವು/ಸಹಾಯಧನದ ವಿವರ. | | | | | |
|---|---|---|---|---|---|
| ಕ್ರ. ಸಂ. | ವಿವರ | ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ನಿಗದಿಪಡಿಸಿರುವ ಗರಿಷ್ಠ ಸಹಾಯಧನ (ರೂ. ಲಕ್ಷಗಳಲ್ಲಿ) | | | |
| | | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | ಒಟ್ಟು |
| 1 | ರೈತರ ಸಂಘಟನೆ | 0.25 | - | - | 0.25 |
| 2 | ರೈತರ ಅಧ್ಯಯನ ಪ್ರವಾಸ @ ರೂ.400/ರೈತ/ದಿನ | 0.90 | 0.90 | - | 1.80 |
| 3 | ಪ್ರಮುಖ ರೈತರಿಗೆ ತರಬೇತಿ @ ರೂ. 12500/- 50 ಸದಸ್ಯರಿಗೆ ದಿನ ಒಂದಕ್ಕೆ (ಮೂರು ತರಬೇತಿಗಳು ಪ್ರತಿ ವರ್ಷ) | 0.375 | 0.375 | - | 0.75 |
| 4 | ಸಂಸ್ಥೆಯ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕರಿಗೆ ತರಬೇತಿ @ ರೂ. 600/ಸದಸ್ಯರು/ದಿನ. 11 ಸದಸ್ಯರಿಗೆ 2 ದಿನದ ತರಬೇತಿ (ಮೂರು ತರಬೇತಿಗಳು ಪ್ರತಿ ವರ್ಷ) | 0.40 | 0.40 | 0.40 | 1.20 |
| 5 | ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ವೆಚ್ಚ | 0.50 | - | - | 0.50 |
| 6 | ಕಾರ್ಯನಿರ್ವಹಣಾ ಅಧಿಕಾರಿಯ ಗೌರವಧನ @ ರೂ. 23000/ಮಾಹೆ – 2 ವರ್ಷಕ್ಕಾಗಿ. | 1.38 | 2.76 | 1.38 | 5.52 |
| 7 | ಸಹಾಯಕ / ಡಿ.ಇ.ಓ.ರ ಗೌರವಧನ @ ರೂ. 7500/ಮಾಹೆ – 2 ವರ್ಷಕ್ಕಾಗಿ | 0.45 | 0.90 | 0.45 | 1.80 |
| 8 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಅನಾವರ್ತ ವೆಚ್ಚ | 1.00 | - | - | 1.00 |
| 9 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಆವರ್ತ ವೆಚ್ಚ | 0.30 | 0.60 | 0.30 | 1.20 |
| 10 | ಮೂಲಭೂತ ಸೌಕರ್ಯ ನಿರ್ಮಾಣ ಹಾಗೂ ವ್ಯವಹಾರ ಯೋಜನೆಯ ಅನುಷ್ಠಾನಕ್ಕೆ ಒಂದು ಬಾರಿಯ ಸುತ್ತು ನಿಧಿ / ಸಹಾಯಧನ | - | - | 10.00 | 10.00 |
| 11 | ಸಂಪನ್ಮೂಲ ಸಂಸ್ಥೆಯ ಸ್ಥಳೀಯ ಸಂಪನ್ಮೂಲ ವ್ಯಕ್ತಿಗೆ ಗೌರವಧನ @ ರೂ. 6500/ಮಾಹೆ | 1.56 | - | - | 1.56 |
| 12 | ಸಂಪನ್ಮೂಲ ಸಂಸ್ಥೆಗಳ ಕಾರ್ಯಕ್ರಮದ ನಿರ್ವಹಣಾ ವೆಚ್ಚ | 1.44 | 1.44 | 1.44 | 4.32 |
| | **ಒಟ್ಟು** | **8.56** | **7.38** | **13.97** | **29.90** |

ಮೇಲೆ ಓದಲಾದ (3)ರ ಪ್ರಸ್ತಾವನೆಗಳಲ್ಲಿ, 2019-20ನೇ ಸಾಲಿನಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯವನ್ನು ಕ್ಷೇತ್ರಮಟ್ಟದಲ್ಲಿ ಪ್ರಾರಂಭಿಸಬೇಕಾಗಿದ್ದು, ಇದಕ್ಕಾಗಿ ರೈತರ ಸಂಘಟನೆ, ರೈತ ಆಸಕ್ತ ಗುಂಪುಗಳ ಪ್ರಮುಖ ಸದಸ್ಯರಿಗೆ ತರಬೇತಿ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ, ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ಕ್ಷೇತ್ರ ಭೇಟಿ/ಅಧ್ಯಯನ ಪ್ರವಾಸ, ಸಂಸ್ಥೆಯ ರಚನೆ ಮತ್ತು ನೋಂದಣಿ ಕಾರ್ಯಕ್ಕಾಗಿ ಕೃಷಿ ಇಲಾಖೆಯಡಿ

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-800-1-57 ಅಡಿಯಲ್ಲಿ 2019-20ನೇ ಸಾಲಿಗೆ ರೂ. 5.00 ಕೋಟಿಗಳನ್ನು ಹಾಗೂ PMKSY-WDC ಕಾರ್ಯಕ್ರಮದ ಬ್ಯಾಚ್-IV ಯೊಜನೆಯ ಫ್ಲೆಕ್ಸಿ ಫಂಡ್ ಘಟಕದಡಿ FPO ತರಹ ಇನ್ನಿತರೆ ನವೀನ ಚಟುವಟಿಕೆಗಳ ಅನುಷ್ಠಾನಕ್ಕೆ ಲಭ್ಯವಿರುವ ಅನುದಾನದಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಕೂಡ ಕಲ್ಪಿಸಲಾಗುವುದು ಎಂದು ತಿಳಿಸುತ್ತಾ, ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ನಿಗಧಿಪಡಿಸಿರುವ ಆರ್ಥಿಕ ನೆರವಿನ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 04 ಕೃಉಇ 2019, ಬೆಂಗಳೂರು, ದಿನಾಂಕ: 15.05.2019.**

ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯವನ್ನು ಕ್ಷೇತ್ರಮಟ್ಟದಲ್ಲಿ ಪ್ರಾರಂಭಿಸಲು ರೈತರ ಸಂಘಟನೆ, ರೈತ ಆಸಕ್ತ ಗುಂಪುಗಳ ಪ್ರಮುಖ ಸದಸ್ಯರಿಗೆ ತರಬೇತಿ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ, ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ಕ್ಷೇತ್ರ ಭೇಟಿ/ಅಧ್ಯಯನ ಪ್ರವಾಸ, ಸಂಸ್ಥೆಯ ರಚನೆ ಮತ್ತು ನೋಂದಣಿ ಕಾರ್ಯಕ್ಕಾಗಿ ಪ್ರತಿ ಸಂಸ್ಥೆಗೆ ರೂ. 30.00 ಲಕ್ಷಗಳ ಮಿತಿಗೊಳಪಟ್ಟು, ಆರ್ಥಿಕ ನೆರವನ್ನು ಮೂರು ವರ್ಷಗಳಿಗೆ ಈ ಕೆಳಕಂಡಂತೆ ನಿಗಧಿಪಡಿಸಿ, ಸರ್ಕಾರವು ಆದೇಶಿಸಿದೆ.

ಘಟಕವಾರು 1000 ಸದಸ್ಯರನ್ನೊಳಗೊಂಡ ಪ್ರತಿ ರೈತ ಉತ್ಪಾದಕರ ಸಂಸ್ಥೆಯ ರಚನೆಗೆ ಮತ್ತು ಉತ್ತೇಜನಕ್ಕೆ ನೀಡಲಾಗುವ ಆರ್ಥಿಕ ನೆರವು/ಸಹಾಯಧನದ ವಿವರ.

| ಕ್ರ. ಸಂ. | ವಿವರ | ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ನಿಗದಿಪಡಿಸಿರುವ ಗರಿಷ್ಠ ಸಹಾಯಧನ (ರೂ. ಲಕ್ಷಗಳಲ್ಲಿ) | | | |
|---|---|---|---|---|---|
| | | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | ಒಟ್ಟು |
| 1 | ರೈತರ ಸಂಘಟನೆ | 0.25 | - | - | 0.25 |
| 2 | ರೈತರ ಅಧ್ಯಯನ ಪ್ರವಾಸ @ ರೂ.400/ರೈತ/ದಿನ | 0.90 | 0.90 | - | 1.80 |
| 3 | ಪ್ರಮುಖ ರೈತರಿಗೆ ತರಬೇತಿ @ ರೂ. 12500/- 50 ಸದಸ್ಯರಿಗೆ ದಿನ ಒಂದಕ್ಕೆ (ಮೂರು ತರಬೇತಿಗಳು ಪ್ರತಿ ವರ್ಷ) | 0.375 | 0.375 | - | 0.75 |
| 4 | ಸಂಸ್ಥೆಯ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕರಿಗೆ ತರಬೇತಿ @ ರೂ. 600/ಸದಸ್ಯರು/ದಿನ. 11 ಸದಸ್ಯರಿಗೆ 2 ದಿನದ ತರಬೇತಿ (ಮೂರು ತರಬೇತಿಗಳು ಪ್ರತಿ ವರ್ಷ) | 0.40 | 0.40 | 0.40 | 1.20 |
| 5 | ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ವೆಚ್ಚ | 0.50 | - | - | 0.50 |
| 6 | ಕಾರ್ಯನಿರ್ವಹಣಾ ಅಧಿಕಾರಿಯ ಗೌರವಧನ @ ರೂ. 23000/ಮಾಹೆ – 24 ತಿಂಗಳುಗಳಿಗಾಗಿ | 1.38 | 2.76 | 1.38 | 5.52 |

| | | | | | |
|---|---|---|---|---|---|
| 7 | ಸಹಾಯಕ / ಡಿ.ಇ.ಓ.ರ ಗೌರವಧನ @ ರೂ. 7500/ಮಾಹೆ – 24 ತಿಂಗಳುಗಳಿಗಾಗಿ | 0.45 | 0.90 | 0.45 | 1.80 |
| 8 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಅನಾವರ್ತ ವೆಚ್ಚ | 1.00 | - | - | 1.00 |
| 9 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಆವರ್ತ ವೆಚ್ಚ | 0.30 | 0.60 | 0.30 | 1.20 |
| 10 | ಮೂಲಭೂತ ಸೌಕರ್ಯ ನಿರ್ಮಾಣ ಹಾಗೂ ವ್ಯವಹಾರ ಯೋಜನೆಯ ಅನುಷ್ಠಾನಕ್ಕೆ ಒಂದು ಬಾರಿಯ ಸುತ್ತು ನಿಧಿ / ಸಹಾಯಧನ | - | - | 10.00 | 10.00 |
| 11 | ಸಂಪನ್ಮೂಲ ಸಂಸ್ಥೆಯ ಸ್ಥಳೀಯ ಸಂಪನ್ಮೂಲ ವ್ಯಕ್ತಿಗೆ ಗೌರವಧನ @ ರೂ. 6500/ಮಾಹೆ | 1.56 | - | - | 1.56 |
| 12 | ಸಂಪನ್ಮೂಲ ಸಂಸ್ಥೆಗಳ ಕಾರ್ಯಕ್ರಮದ ನಿರ್ವಹಣಾ ವೆಚ್ಚ | 1.44 | 1.44 | 1.44 | 4.32 |
| | **ಒಟ್ಟು** | **8.56** | **7.38** | **13.97** | **29.90** |

ಸದರಿ ಕಾರ್ಯಕ್ರಮಕ್ಕೆ ಕೃಷಿ ಇಲಾಖೆಯ ವೆಚ್ಚವನ್ನು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-800-1-57 ಅಡಿಯಲ್ಲಿ ಒದಗಿಸಿರುವ ಅನುದಾನ ದಿಂದ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕದ ಬ್ಯಾಚ್-IV ಯೋಜನೆಯ ಫ್ಲೆಕ್ಸಿ ಫಂಡ್ ಘಟಕದಡಿ FPO ತರಹ ಇನ್ನಿತರೆ ನವೀನ ಚಟುವಟಿಕೆಗಳ ಅನುಷ್ಠಾನಕ್ಕೆ ಲಭ್ಯವಿರುವ ಅನುದಾನದಿಂದ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಆಯಾಯ ಯೋಜನೆಗಳ ಮಾರ್ಗಸೂಚಿಯನುಸಾರ ಭರಿಸತಕ್ಕದ್ದು.

ಇತರೆ ಇಲಾಖೆಯಡಿ ರಚಿಸಲಾಗುವ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಆರ್ಥಿಕ ನೆರವನ್ನು ಆಯಾ ಇಲಾಖೆಗಳಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: FD 01 TFP 2019, ದಿನಾಂಕ: 03.04.2019ರಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)/ (ಇ& ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು ( ಎ & ಇ), ಕರ್ನಾಟಕ, ಬೆಂಗಳೂರು.

3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.
8. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
9. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
10. ಆಯುಕ್ತರು/ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
11. ಆಯುಕ್ತರು, ರೇಷ್ಮೆ ಇಲಾಖೆ, ಬೆಂಗಳೂರು.
12. ಆಯುಕ್ತರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
13. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಧಾರವಾಡ ಮತ್ತು ರಾಯಚೂರು.
14. ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
15. ಕುಲಪತಿಗಳು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ.
16. ಕುಲಪತಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ, ಬೀದರ್.
17. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
18. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
19. ನಿರ್ದೇಶಕರು, TNMC, ಖನಿಜ ಭವನ, ಬೆಂಗಳೂರು.
20. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
21. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ – 4&5), ಆರ್ಥಿಕ ಇಲಾಖೆ, ಬೆಂಗಳೂರು.
22. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ,
2. ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ ಇವರ ಆಪ್ತ ಸಹಾಯಕರು
3. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.